**ಸಾಕ್ಷಿಯನ್ನು ದಿಃ 09-07-2018 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲುಃ</u> ಪ್ರತಿವಾದಿ ಪರ ಶ್ರೀ ಎಮ್ ಎ ಬಿ ವಕೀಲರಿಂದಃ**

1. ಹುಸೇನಸಾಬ ರವರಿಗೆ 4 ಜನ ಮಕ್ಕಳು. ರಾಜೇಸಾಬ, ಹೈದರಸಾಬ, ಬೇರೆಯವರ ಹೆಸರು ನೆನಪಿಲ್ಲ. ಹುಸೇನಸಾಬ ರವರ ಹೆಂಡತಿ ಹೆಸರು ಗೊತ್ತಿಲ್ಲ. ದಾವಲಸಾಬ ರವರು ರಾಜೇಸಾಬ ರವರ ತಂದೆ. ದಾವಲಸಾಬ ರವರು ಯಾವಾಗ ತೀರಿಕೊಂಡಿದ್ದಾರೆ ನೆನಪಿಲ್ಲ. ಬಡಿಗೇರ ರವರ ಮನೆತನಕ್ಕೆ 18 ಎಕರೆ ಜಮೀನು ಇತ್ತು. ಅದರ ಸರ್ವೆ ನಂಃ 105. ಅದರಲ್ಲಿ ನಾಲ್ಕು ಪಟ್ಟಿ ಇರಬಹುದು, ಅದರೆ ಎಷ್ಟು ವಿಸ್ತೀರ್ಣದ ಒಂದು ಪಟ್ಟಿ ಎಂದು ಹೇಳಲಾಗುವುದಿಲ್ಲ. 3 ಎಕರೆ ಜಮೀನನ್ನು ವಾದಿ ಮನೆತನದವರು ದಾವಲಸಾಬ ರವರಿಗೆ ಮಾರಾಟ ಮಾಡಿದ್ದಾರೆ. ಮಾನಪ್ಪ ರವರು 1930-1935 ರಲ್ಲಿ ಮಾರಾಟ ಮಾಡಿದ್ದರು. ಮಾನಪ್ಪ ವೀರಭದ್ರಪ್ಪ ರವರಿಗೆ ಕಾಕನಾಗಬೇಕು. ವೀರಭದ್ರಪ್ಪ ತಂದೆ ರುದ್ರಪ್ಪ ಬಡಿಗೇರ ರವರ ತಾಯಿ ಕಾಳವ್ವ ಎನ್ನುವದು ನಿಜ. ಶಿವಪ್ಪ ತಂದೆ ಲಕ್ಷ್ಮಪ್ಪ ಬಡಿಗೇರ ರವರ ತಾಯಿ ದೇವಕ್ಕ ಎನ್ನುವದು ನಿಜ.
2. 1937 ರಲ್ಲಿ ಮೇಲೆ ಹೇಳಿದ ವೀರಭದ್ರಪ್ಪ ಹಾಗೂ ಶಿವಪ್ಪ ರವರು ಅಲ್ಪವಯಿ ಆಗಿದ್ದು ಅವರ ಅ.ಸ.ದಾರರಾಗಿ ಕಾಳವ್ವ ಹಾಗೂ ದೇವಕ್ಕ ರವರು ಸರ್ವೆ ನಂಃ 105/4 ರ 9 ಎಕರೆ 17 ಗುಂಟೆ ಜಮೀನನ್ನು ಹುಸೇನಸಾಬ ತಂದೆ ದಾವಲಸಾಬ ಬೇಲೇರಿ ರವರಿಗೆ ಮಾರಾಟ ಮಾಡಿರುತ್ತಾರೆ ಎನ್ನುವದು ಸರಿಯಲ್ಲ. ಸರ್ವೆ ನಂಃ 105/2 ವಿಸ್ತೀರ್ಣ 3 ಎಕರೆ 26 ಗುಂಟೆ ಸರ್ವೆ ನಂಃ 105/3 ವಿಸ್ತೀರ್ಣ 1 ಎಕರೆ 37 ಗುಂಟೆ ಜಮೀನುಗಳ ಸಂರಕ್ಷಣೆದಾರ ರೈತ ಎಂದು 1947 ರಲ್ಲಿ ಸರ್ಕಾರ ಘೋಷಣೆ ಮಾಡಿ ಹುಸೇನಸಾಬ ತಂದೆ ದಾವಲಸಾಬ ಬೇಲೇರಿ ರವರಿಗೆ ಆಸ್ತಿಯನ್ನು ಮಂಜೂರು ಮಾಡಿತ್ತು ಎನ್ನುವದು ಸರಿಯಲ್ಲ. ವಾದಿಯರು ದಾವಾ ಆಸ್ತಿಯ ಸ್ವಾಧೀನದಲ್ಲಿ ಎಂದೂ ಇರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ವಾದಿಯರು ಕೋರನಾತೆಯಿಂದ

ಇರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಲ್ಲಿ ಮೊದಲು ಪ್ರತಿವಾದಿಯರ ಪೂರ್ವಜರಾದ ಹುಸೇನಸಾಬ ಬೇಲೇರಿ ನಂತರ ಅವರ ಮಗನಾದ ದಾವಲಸಾಬ ರವರು ಅವರಾದ ನಂತರ ಪ್ರತಿವಾದಿಯರು ದಾವಾ ಆಸ್ತಿಗಳ ಸ್ವಾಧೀನದಲ್ಲಿದ್ದಾರೆ ಎನ್ನುವದು ಸರಿಯಲ್ಲ. ನನಗೆ ದಾವಾ ಆಸ್ತಿಗಳ ಬಗ್ಗೆ ಹಾಗೂ ವಾದಿಯರ ಮನೆತನದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಯರಿಗೆ ಸಂಬಂಧಿಕನಾಗಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಅದೆ.

ಸಹಿ -09-07-2018

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಗದಗ**